


# ನನ್ನಿಂದ ದೂರವಿರಿ!

ಚಿತ್ರದಲ್ಲಿ ಕಾಣುತ್ತಿರುವುದು ಹಿಟ್ಟಿನ ಗಿರಣಿ ಯಂತ್ರ. ಗ್ರಾಮ–ನಗರ ಪ್ರದೇಶವೆಂಬ ಭೇದವಿಲ್ಲದೆ ತಮ್ಮ ಕಾಯಕವನ್ನು ಶ್ರದ್ಧೆಯಿಂದ ಇಂತಹ ಯಂತ್ರಗಳು, ಮನುಷ್ಯನ ನಾಲಿಗೆಗೆ ವಿವಿಧ ಖಾದ್ಯಗಳನ್ನು ಉಣಬಡಿಸಲು ನೆರವಾಗುತ್ತಿವೆ. ಹಿಟ್ಟಿನ ಗಿರಣಿಗಳಿಗೆ ಕಾಲಿಟ್ಟರೆ ಸಾಕು ನಾವೂ ಹಿಟ್ಟುಮಯ ಆಗುವುದು ಗ್ಯಾರಂಟಿ. ಇದೇ ಕಾರಣಕ್ಕೆ ಸಾಕಷ್ಟು ಮಂದಿ ಹಿಟ್ಟಿನ ಗಿರಣಿ ಯಂತ್ರಗಳ ಅಂಗಡಿಯ ಒಳಗೆ ಕಾಲಿಡಲು ಹಿಂಜರಿದು ಅದರೊಳಗಿನ ಅದ್ಭುತವಾದ ಮಜ ಸವಿಯುವುದನ್ನು ತಪ್ಪಿಸಿಕೊಳ್ಳುತ್ತಾರೆ. ಅಪಾಯದ ಮುನ್ನೆಚ್ಚರಿಕೆ ಕ್ರಮವಾಗಿ ಯಂತ್ರಗಳಿಂದ ದೂರವಿರಿ ಎಂಬ ಎಚ್ಚರಿಕೆಯನ್ನೂ ಅಂಗಡಿಯ ಮಾಲೀಕರು, ಕೆಲಸಗಾರರು ನೀಡುತ್ತಿರುತ್ತಾರೆ. ಅಂದಹಾಗೇ ಈ ಚಿತ್ರದಲ್ಲಿ ಕಾಣುತ್ತಿರುವುದೂ ಇಂಥದ್ದೇ ಒಂದು ಎಚ್ಚರಿಕೆ. ಅದುವೇ, 'ನನ್ನಿಂದ ದೂರವಿರಿ!' ಎಂದು. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ಪಟ್ಟಣದ ಶಾಹಿಜಾನ್ ಅವರ ಗಿರಣಿಯ ಯಂತ್ರಕ್ಕೆ ಅಡ್ಡಲಾಗಿ ಉದ್ದನೆಯ ಹಲಗೆಯನ್ನು ಅಳವಡಿಸಿದ್ದು, ಅದರ ಮೇಲೆ, 'ನನ್ನಿಂದ ದೂರವಿರಿ' ಎಂಬ ಸಂದೇಶವನ್ನು ನೀಡಲಾಗಿದೆ. ಯಂತ್ರದ ಉದ್ದನೆಯ ಪಟ್ಟಿಗೆ ಬಟ್ಟೆಯೋ, ಅಂಗಾಂಗಗಳೋ ಸಿಲುಕಿ ಜೀವಕ್ಕೆ ಅಪಾಯ ಸಂಭವಿಸಬಹುದು ಎಂಬುದು ಇದಕ್ಕೆ ಕಾರಣ.

ಮೈತುಂಬ ಹಿಟ್ಟಿನ ಸ್ನಾನ ಮಾಡಿರುತ್ತಿದ್ದ ಗಿರಣಿ ಕೆಲಸದವರು, ಗಿರಣಿಯ ಝುಟಕ್ – ಫಟಕ್ ಸದ್ದಿಗೆ ಗ್ರಾಹಕರು ಹೇಳಿದ್ದನ್ನು ಕೇಳಿಸಿಕೊಳ್ಳಲಾಗದೆ, ಕೈಸನ್ನೆ ಬಾಯಿಸನ್ನೆಯಲ್ಲೇ ವ್ಯವಹರಿಸುತ್ತಾರೆ. ಬರೀ ಸನ್ನೆಯ ಮೂಲಕವೇ ಗ್ರಾಹಕರು ತಂದಿರುವುದು ಗೋಧಿಯೋ, ಜೋಳವೋ, ರಾಗಿಯೋ ಅಥವಾ ಇನ್ನಿತರ ಪದಾರ್ಥವೋ ಎಂಬುದನ್ನು ಅರ್ಥ ಮಾಡಿಕೊಂಡು ಪ್ರತ್ಯೇಕ ಮಷಿನ್‌ಗಳಲ್ಲಿ ಧಾನ್ಯ ಬೀಸಿ ಕೊಡುತ್ತಿದ್ದರು. ಗ್ರಾಮಾಂತರ ಪ್ರದೇಶದಲ್ಲಂತೂ ಯಂತ್ರಗಳ ಸದ್ದು ನಿತ್ಯವೂ ಕಿವಿಗೆ ಬೀಳುತ್ತಿರುತ್ತದೆ. ಆದರೆ ನಗರ ಪ್ರದೇಶಗಳಲ್ಲಿ ಈ ಯಂತ್ರಗಳ ಸದ್ದು ನಿಧಾನಕ್ಕೆ ಅಡಗುತ್ತಿದೆ. ಕಾರಣ ಅಕ್ಕಿ, ಗೋಧಿ, ಜೋಳ, ರಾಗಿ ಸೇರಿದಂತೆ ಅನೇಕ ಧಾನ್ಯಗಳು ಮೊದಲೇ ಹಿಟ್ಟಾಗಿ, ಪ್ಯಾಕ್ ಆಗಿ ಸೂಪರ್ ಮಾರ್ಕೆಟ್‌ಗಳಲ್ಲಿ ಲಭ್ಯವಿರುವುದು.

–ಸುಘೋಷ ಸ. ನಿಗಳೆ, ಬೆಂಗಳೂರು

# ಕೋಳಿಗೂ ಕೆಎಸ್‌ಆರ್‌ಟಿಸಿ ಟಿಕೆಟ್!

ಈಚೆಗೆ ನಾನು ಸಿದ್ದಾಪುರದಿಂದ ಸೊರಬಕ್ಕೆ ಶಿರಸಿ ವಿಭಾಗದ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಮಹಿಳೆಯರಿಬ್ಬರು ಅವರ ಚೀಲಗಳೊಂದಿಗೆ ಬಸ್ ಹತ್ತಿದರು. ಆ ಇಬ್ಬರಿಗೆ ಕಂಡಕ್ಟರ್ ಟಿಕೆಟ್ ಕೊಟ್ಟರು. ಬಸ್ ಸ್ವಲ್ಪ ದೂರ ಬಂದ ಮೇಲೆ ಆ ಮಹಿಳೆಯು ತಂದಿದ್ದ ಚೀಲದಲ್ಲಿ ಇದ್ದ ಕೋಳಿಯು ಕೂಗಿತು. ಇದನ್ನು ಗಮನಿಸಿದ ಕಂಡಕ್ಟರ್, ಚೀಲದಲ್ಲಿ ಕೋಳಿ ಇದೆಯಾ ಎಂದು ಪ್ರಶ್ನಿಸಿದರು. ಕೋಳಿ ಇರುವುದು ಖಾತರಿಯಾಗಿ ಅದಕ್ಕೂ ಟಿಕೆಟ್ ತೆಗೆದುಕೊಳ್ಳಬೇಕು ಎನ್ನುತ್ತಲೇ ಹಾಫ್ ಟಿಕೆಟ್ ಹರಿದೇ ಬಿಟ್ಟರು. ಟಿಕೆಟ್ ಮೇಲೆ 1 ಕೋಳಿ ಎಂದೂ ಬರೆದರು. ಕೋಳಿಗೂ ಟಿಕೆಟ್ ನೀಡಿದ್ದಕ್ಕೆ ಆ ಮಹಿಳೆ ಆಶ್ಚರ್ಯಗೊಂಡರು. 'ಜಾತ್ರೆಗೆ ಹರಕೆ ಕೊಡುವ ಸಲುವಾಗಿ ಆ ಕೋಳಿಯನ್ನು ತೆಗೆದುಕೊಂಡು ಹೋಗುತ್ತಿದ್ದೇನೆ. ಇದಕ್ಕೂ ಟಿಕೆಟ್ ಕೊಟ್ಟರೆ ಹೇಗೆ' ಎನ್ನುತ್ತ ಅವರು ಸುಮ್ಮನಾದರು.




ಆ ಕೋಳಿ ಸುಮಾರು ಒಂದು ಕೆ.ಜಿ. ತೂಕ ಇತ್ತೇನೋ. ಸಾರಿಗೆ ಬಸ್‌ನಲ್ಲಿ ಪ್ರಯಾಣ ಮಾಡುವಾಗ ಒಬ್ಬ ವ್ಯಕ್ತಿಗೆ ಸುಮಾರು 10 ಕೆ.ಜಿ. ತೂಕದವರೆಗಿನ ಚೀಲಗಳಿಗೆ ಯಾವುದೇ ಟಿಕೆಟ್ ಇಲ್ಲ. ಆದರೆ ಸುಮಾರು 1 ಕೆ.ಜಿ. ತೂಕದ ಕೋಳಿಗೆ ಟಿಕೆಟ್ ಕೊಟ್ಟಿದ್ದು ನೋಡಿ ಕೆಎಸ್‌ಆರ್‌ಟಿಸಿಗೆ ಕಣ್ಣಿಲ್ಲ ಎಂದೆನಿಸಿತು. ಈ ಪ್ರಸಂಗ ನಡೆದದ್ದು ಕೆ.ಎ. 31 ಎಫ್394 ಸಂಖ್ಯೆಯ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ. ಇಂತಹದ್ದೇ ಒಂದು ಪ್ರಕರಣ ಈಚೆಗೆ ಚಿಕ್ಕಬಳ್ಳಾಪುರದಲ್ಲೂ ನಡೆದಿತ್ತು.

–ಪಿ.ಹೆಚ್. ಪಾಟೀಲ್. ರಾಣೆಬೆನ್ನೂರು

# ಬಿಳೆಮುಳ್ಳು ಹಣ್ಣು



ಗುಡ್ಡಕಾಡು ಸುತ್ತಾಡುವ ಹುರುಪಿದ್ದರೆ, ವರ್ಷದ ಎಲ್ಲ ಋತುಗಳಲ್ಲಿ ಒಂದಿಲ್ಲೊಂದು ಕಾಡುಹಣ್ಣು ಕಣ್ಣಿಗೆ ಬೀಳದಿರದು. ಮಳೆಗಾಲದಿಂದ ಹಿಡಿದು ಬೇಸಿಗೆಕಾಲದವರೆಗೆ ಕಾಡುಹಣ್ಣುಗಳ ಪರ್ವಕಾಲ. ಚಿತ್ರದಲ್ಲಿ ಕಾಣುವ ಬಿಳೆಮುಳ್ಳು ಹಣ್ಣಿನ ಗಿಡ ಜನವರಿ ಫೆಬ್ರುವರಿಯಲ್ಲಿ ಹೂಬಿಡಲು ಆರಂಭಿಸಿ ಮಾರ್ಚ್ ಏಪ್ರಿಲ್‌ನಲ್ಲಿ ಹೆಚ್ಚಾಗಿ ಹಣ್ಣು ಕೊಡುತ್ತದೆ. ಮೈತುಂಬ ದಪ್ಪ ಮುಳ್ಳುಗಳನ್ನು ಹೊದ್ದುಕೊಂಡಿರುವ ಈ ಗಿಡ ಪೊದೆಯಾಕಾರದಲ್ಲಿ ಸಿಕ್ಕುಸಿಕ್ಕಾಗಿ ಹಬ್ಬಿ ಇಪ್ಪತ್ತು ಅಡಿಗಿಂತಲೂ ಹೆಚ್ಚು ಎತ್ತರಕ್ಕೆ ಬೆಳೆಯುತ್ತದೆ. ಹಣ್ಣುಕೊಡುವ ಕಾಲಕ್ಕೆ ಗಿಡದಲ್ಲಿ ವಿರಳ ಎಲೆಗಳು ಇರುತ್ತದೆ. ತಿಳಿ ಹಳದಿಬಣ್ಣದ ಈ ಹಣ್ಣು ತಿನ್ನಲು ಬಹಳ ರುಚಿಯಾಗಿರುತ್ತದೆ.

–ಧರ್ಮಾನಂದ ಶಿರ್ವ, ಬೆಂಗಳೂರು

## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in

@SudhaWeekly